# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.,

## **MC No**. 35/2022

**RW** : 2

**ದಿನಾಂಕಃ 29.11.2025ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಶ್ರೀ D.K. ವಕೀಲರಿಂದಃ**

ನಾನು ಈ ದಾವೆಯಲ್ಲಿ ಎದುರುದಾರನಾಗಿದ್ದು, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ. ನಾನು ಅದಕ್ಕೆ ಓದಿ ನೋಡಿ ತಿಳಿದುಕೊಂಡು ಸಹಿ ಹಾಕಿರುತ್ತೇನೆ. ನಾನು ನನ್ನ ದಾವೆಯ ಪರವಾಗಿ ಕೆಳಕಂಡ ದಾಖಲಾತಿಗಳನ್ನು ಹಾಜರುಮಾಡಿರುತ್ತೇನೆ.

**ಪಾಟೀಸವಾಲು ಅರ್ಜಿದಾರರ ಪರ ಶ್ರೀ.ಎಸ್.ಕೆ. ವಕೀಲರಿಂದಃ**

ಎದುರುದಾರರ ಮನೆಯಿಂದ ನಮ್ಮ ಮನೆ 45 ಕಿ.ಮೀ. ದೂರದಲ್ಲಿದೆ. ನನ್ನ ತಂಗಿಯನ್ನು ಎದುರುದಾರರ ದೊಡ್ಡಪ್ಪನ ಮಗನಿಗೆ ಕೊಟ್ಟಿರುತ್ತಾರೆ. ನಾನು ಎದುರುದಾರರ ಮನೆಗೆ ವರ್ಷಕ್ಕೆ ಒಮ್ಮೆಯಾದರೂ ಹೋಗಿಬರುತ್ತೇನೆ. ನಾನು ದೇವಸ್ಥಾನದ ಧರ್ಮದರ್ಶಿಯಾಗಿದ್ದು, ಅವರ ಕುಟುಂಬದ ಕಾರ್ಯಕ್ರಮಗಳಿಗೆ ಹೋಗಿಬರುತ್ತಿರುತ್ತೇನೆ. ನಮ್ಮ ಕುಟುಂಬದ ದೈವಗಳು ಮತ್ತು ಅವರ ಕುಟುಂಬದ ದೈವಗಳು ಬೇರೆ ಬೇರೆ ಜಾಗದಲ್ಲಿರುತ್ತವೆ. ದಿಃ01.05.2013 ರಂದು ವಿವಾಹವಾಗಿರುತ್ತದೆ. ನಾನು ಹೋಗಿರುವುದಿಲ್ಲ. 2013 ರಿಂದ 2018 ರವರೆಗೆ ಮಾಣಿಯಲ್ಲಿ ವಾಸವಾಗಿದ್ದರು. ನಾನು ಎದುರುದಾರರ ಮನೆಗೆ ಹೋದಾಗ ಕೆಲವೊಮ್ಮೆ ಮಾತ್ರ ಅರ್ಜಿದಾರರು ಸಿಕ್ಕಿರುತ್ತಾರೆ. ಎದುರುದಾರರು ಮತ್ತು ಅರ್ಜಿದಾರರ ನಡುವೆ ಭಿನ್ನಾಭಿಪ್ರಾಯ ಇದ್ದ ಬಗ್ಗೆ ನನಗೆ

ದಿಃ06.02.2022 ರಂದು ಬೆಳಿಗ್ಗೆ ತಿಳಿಯಿತು. ಆಗ ನನ್ನನ್ನು ಬರುವಂತೆ ಎದುರುದಾರರು ಕರೆದಿರುತ್ತಾರೆ. ಪುತ್ತೂರು ಮಹಾಮಾಯಿ ದೇವಸ್ಥಾನಕ್ಕೆ ನಾನು 10 ಗಂಟೆಗೆ ಹೋಗಿರುತ್ತೇನೆ. ಅರ್ಜಿದಾರರ ಕಡೆಯಿಂದ ಅವರ ತಂಗಿಯಂದಿರು, ತಾಯಿ, ತಮ್ಮ, ದೊಡ್ಡಮ್ಮ ಬಂದಿದ್ದರು. ಎದುರುದಾರರ ಮನೆಯಿಂದ ಅವರ ಅಮ್ಮ ಮತ್ತು ಚಿಕ್ಕಮ್ಮನ ಮಗ ಬಂದಿದ್ದರು. ಪಂಚಾಯ್ತಿಯ ವಿಷಯವನ್ನು ನಾವು ಬರವಣಿಗೆಯಲ್ಲಿ ನಮೂದು ಮಾಡಬೇಕು ಎಂಬ ಅಗತ್ಯ ಕಂಡುಬಂದಿರುವುದಿಲ್ಲ. ನನಗೆ ಭಿನ್ನಾಭಿಪ್ರಾಯದ ಬಗ್ಗೆ 2 ಕಡೆಯವರು ಹೇಳಿರುತ್ತಾರೆ. ಆ ಸಮಯದಲ್ಲಿ ಸಹ ಅರ್ಜಿದಾರರು ಎದುರುದಾರರ ಜೊತೆಯಲ್ಲಿ ಇದ್ದರು. ನಾನು ಎದುರುದಾರರಿಗೆ ಹೊಂದಾಣಿಕೆಯಿಂದ ಇರಬೇಕು, ಅವರೊಂದಿಗೆ ಹೋಗಿ ಎಂದು ಬುದ್ಧಿ ಮಾತು ಹೇಳಿರುತ್ತೇನೆ. ನಾನು ಎದುರುದಾರರನ್ನು ಯಾವತ್ತೂ ಬೆಂಗಳೂರಿನಲ್ಲಿ ಬೇಟಿ ಮಾಡಿರುವುದಿಲ್ಲ. ಎದುರುದಾರರು ಅರ್ಜಿದಾರರೊಂದಿಗೆ ಒಟ್ಟಿಗೆ ಸಂಸಾರ ಮಾಡಲು ಮನೆ ಮಾಡಿದ್ದಾರೋ/ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಎದುರುದಾರರು ಪುತ್ತೂರಿಗೆ ಬಂದು ವಕೀಲ ವೃತ್ತಿ ಮಾಡುತ್ತೇನೆ ಎಂದು ನನ್ನ ಎದುರಿನಲ್ಲಿ ಹೇಳಿರುತ್ತಾರೆ. ಅದೇ ಸಮಯ ಬೆಂಗಳೂರಿನಲ್ಲಿ ಬೇರೆ ಯಾವುದಾದರೂ ಕೆಲಸಕ್ಕೆ ಅರ್ಜಿ ಹಾಕಿದ ಬಗ್ಗೆ ನನಗೆ ಹೇಳಿರುವುದಿಲ್ಲ. ಅರ್ಜಿದಾರರೊಂದಿಗೆ ಇರಲು ಎದುರುದಾರರು ಪುತ್ತೂರಿನಲ್ಲಿ ವಕೀಲ ವೃತ್ತಿ ಮಾಡುತ್ತೇನೆ ಎಂದು ಹೇಳಿರುತ್ತಾರೆ ಎಂದು ಈ ದಿನ ನಾನು ಸೃಷ್ಟಿಸಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳನ್ನು ನಾನು ಎದುರುದಾರರ ಕುಮ್ಮಕ್ಕಿನ ಮೇರೆಗೆ ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಸಮಯಾವಕಾಶ ಬೇಕು ಎಂದು ನನ್ನ ಕೇಳಿ, ನಂತರ ಸ್ಪಂದಿಸಿರುವುದಿಲ್ಲ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಎದುರುದಾರರ ಸಂಬಂಧಿಕನಾಗಿರುವುದರಿಂದ

ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಅರ್ಜಿದಾರರೂ ಕೂಡಾ ಸಂಬಂಧಿಕರು.

**ಮರುವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು